# LIBRARY & INFORMATION CENTRE

## GIT in NEWS

**Vijaykarnataka 04-02-2016**

# 25ರಿಂದ ಜಿಐಟಿ ಓರಾ 2016

## ಮೂರು ದಿನ ನಾನಾ ಸಾಂಸ್ಕೃತಿಕ ಕಾರ್ಯಕ್ರಮ | ವಿದ್ಯಾರ್ಥಿಗಳಿಗೆ ಸ್ಪರ್ಧೆ ಆಯೋಜನೆ

**ವಿಜಯ ಕರ್ನಾಟಕ ಮಾಧ್ಯಮ ಸಹಯೋಗ**

■ **ವಿಕ ಸುದ್ದಿಲೋಕ** ಬೆಳಗಾವಿ

ಇಲ್ಲಿನ ಉದ್ಯಮಬಾಗದ ಕರ್ನಾಟಕ ಲಾ ಸಂಸ್ಥೆಯ ಜಿಐಟಿ ಕಾಲೇಜಿನಲ್ಲಿ ಇದೇ 25ರಿಂದ ಮೂರು ದಿನಗಳ ಕಾಲ 'ಓರಾ-2016' ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.



ವಿದ್ಯಾರ್ಥಿಗಳಲ್ಲಿ ಸಂಘಟನಾತ್ಮಕ ಕೌಶಲ ಬೆಳೆಸುವುದು ಮತ್ತು ನಾಯಕತ್ವ ಗುಣ ಬೆಳೆಸುವ ನಿಟ್ಟಿನಲ್ಲಿ ಕಳೆದ ಐದು ವರ್ಷಗಳಿಂದ 'ಓರಾ' ಕಾರ್ಯ ಕ್ರಮ ನಡೆಸಲಾಗುತ್ತಿದೆ. ಅದರಂತೆ ಈ ವರ್ಷವೂ ವಿಶೇಷವಾಗಿ ವಿದ್ಯಾರ್ಥಿಗಳಿಂದಲೇ ಕಾರ್ಯಕ್ರಮ ಸಂಘಟಿಸಲಾಗುತ್ತಿದೆ ಎಂದು ಕಾಲೇಜಿನ ಪ್ರಾಚಾರ್ಯ ಎ.ಎಸ್. ದೇಶಪಾಂಡೆ ಮಾಹಿತಿ ನೀಡಿದರು. ಕಾಲೇಜಿನ ಆವರಣದಲ್ಲಿ ಮೂರು ದಿನ ನಡೆಯುವ ಕಾರ್ಯಕ್ರಮದಲ್ಲಿ ಇದೇ 25, 26ರಂದು ವಿದ್ಯಾರ್ಥಿಗಳಿಂದ ಚರ್ಚಾ ಸ್ಪರ್ಧೆ, ನೃತ್ಯ, ಸಂಗೀತ, ಚಿತ್ರಕಲೆ, ನಾಟಕ ಸೇರಿದಂತೆ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ಸ್ಪರ್ಧೆ ನಡೆಯಲಿದೆ. ಈ ಸ್ಪರ್ಧೆಯಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ಪ್ರತಿ ವಿದ್ಯಾರ್ಥಿಯ ಸುಪ್ತ ಪ್ರತಿಭೆಯನ್ನು ಗುರುತಿಸುವ ಸಲುವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮಕ್ಕೆ ಗಣ್ಯರ ಜತೆಗೆ ಕಾಲೇಜಿನ ಹಳೆಯ ವಿದ್ಯಾರ್ಥಿಗಳಿಗೂ ಆಹ್ವಾನ ನೀಡಲಾಗಿದೆ. ಕಾಲೇಜು ಹಾಗೂ ಆಹ್ವಾನಿತ ಕಾಲೇಜಿನ ವಿದ್ಯಾರ್ಥಿಗಳು ಸೇರಿ ಸುಮಾರು 8ರಿಂದ 9ಸಾವಿರ ಜನರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದ ಆಯೋಜನೆ, ಭದ್ರತೆ, ಅತಿಥಿಗಳ ಸ್ವಾಗತ ಎಲ್ಲವನ್ನೂ ವಿದ್ಯಾರ್ಥಿಗಳೇ ನಿರ್ವಹಿಸುವುದು ಕಾರ್ಯಕ್ರಮದ ಮತ್ತೊಂದು ವಿಶೇಷ ಎಂದು ಅವರು ಮಾಹಿತಿ ನೀಡಿದರು.



ಈ ಬಾರಿ ಕಾರ್ಯಕ್ರಮ ನೀಡಲಿರುವ ವಿಶಾಲ್-ಶೇಖರ್.



ಶಂಕರ್ ಮಹಾದೇವನ್ ಕಾರ್ಯಕ್ರಮ.



ಫರ್ಹಾನ್ ಅಖ್ತರ್ ಕಾರ್ಯಕ್ರಮ.

### ಈ ಬಾರಿ ಬಾಲಿವುಡ್ ಗಾಯಕ ವಿಶಾಲ್-ಶೇಖರ್ ಮೆರುಗು

'ಓರಾ-2016' ಕಾರ್ಯಕ್ರಮದ ಕೊನೆಯ ದಿನ 27ರಂದು ಸಂಜೆ ಸಮಾರೋಪ ಸಮಾರಂಭ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಬಾಲಿವುಡ್ ಗಾಯಕ, ಸಂಗೀತ ನಿರ್ದೇಶಕರಾದ ವಿಶಾಲ್ ದದ್ಲಾನಿ, ಶೇಖರ್ ರಜವಾನಿ ಗಾಯನ ಪ್ರಸ್ತುತಪಡಿಸಲಿದ್ದಾರೆ. ಇವರು ಹಿಂದಿ ಭಾಷೆಯ ಸರಿಗಮಪ ಚಾಲೆಂಜ್, ಇಂಡಿಯನ್ ಐಡಲ್, ಇಂಡಿಯನ್ ಐಡಲ್ ಜೂನಿಯರ್ ಕಾರ್ಯಕ್ರಮಗಳಲ್ಲಿ ನಿರ್ಣಾಯಕರಾಗಿ ಗುರುತಿಸಿಕೊಂಡಿದ್ದಾರೆ. ಅಲ್ಲದೆ, ಝಂಕಾರ್ ಬೀಟ್ಸ್, ಓಂ ಶಾಂತಿ ಓಂ, ರಾ ಒನ್, ಚೆನ್ನೈ ಎಕ್ಸ್‌ಪ್ರೆಸ್, ಬ್ಯಾಂಗ್ ಬ್ಯಾಂಗ್, ಹ್ಯಾಪಿ ನ್ಯೂ ಇಯರ್, ಬಾಜಿರಾವ್ ಮಸ್ತಾನಿ ಮತ್ತಿತರ ಪ್ರಸಿದ್ಧ ಹಿಂದಿ ಚಿತ್ರಗಳಿಗೆ ಸಂಗೀತ ನೀಡಿದ್ದಾರೆ. ಈ ವರೆಗೆ ನಡೆದ 'ಓರಾ' ಉತ್ಸವದಲ್ಲಿ ಕೆಕೆ, ಸುನಿಧಿ ಚೌಹಾಣ, ಫರ್ಹಾನ್ ಅಖ್ತರ್, ಶಂಕರ ಮಹಾದೇವನ್ ಪಾಲ್ಗೊಂಡು ಸಂಗೀತ ಪ್ರದರ್ಶನ ನೀಡಿದ್ದಾರೆ ಎಂದು ಎ.ಎಸ್. ದೇಶಪಾಂಡೆ ತಿಳಿಸಿದರು.